ಸಿ.ಸಿ .ನಂ.87/2023  ಪಿಡಬ್ಲೂಃ 1

ದಿನಾಂಕಃ 23-01-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀಮತಿ ಎಸ್ ಡಿ ಎನ್ ವಕೀಲರಿಂದಃ**

2. ನಾನು 2019 ರಿಂದ ಫಿರ್ಯಾದು ಸಹಕಾರಿಯಲ್ಲಿ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಸಾಲಗಾರರಿಗೆ ಸಾಲವನ್ನು ನೀಡುವಾಗ ನಾನು ಫಿರ್ಯಾದು ಸಂಸ್ಥೆ ,ಯಲ್ಲ್ ಕಾರ್ಯ ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿ . ಈ ಪ್ರಕರಣದ ಸಾಲಗಾರರ ಬಗ್ಗೆ ಮತ್ತು ಆರೋಪಿತರ ಬಗ್ಗೆ ಹಾಗೂ ಜಾಮೀನುದಾರರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ . ಈ ಪ್ರಕರಣದ ಸಾಲಗಾರರ ಹೆಸರು ದೇವು ವೆಂಕಟ ಗೌಡಾ. ಜಾಮೀನುದಾರರ ಹೆಸರು ಗುರು ಕನ್ನೆ ಗೌಡಾ , ವಿಜಯ ಸಣ್ಣು ಗೌಡಾ. ಸಾಲಗಾರ ಚಾಲಕ ವೃತ್ತಿಯನ್ನು ಮಾಡುತ್ತಿದ್ದರು. ಜಾಮೀನುದಾರರು ಕೂಡ ಚಾಲಕ ವೃತ್ತಿಯನ್ನು ಮಾಡುತ್ತಿದ್ದರು. ಸದರಿ ವಿಷಯವನ್ನು ಫಿರ್ಯಾದಿಯಲ್ಲಿ ನಮೂದು ಮಾಡಿಲ್ಲ. ಸಾಲಗಾರರ ವಾರ್ಷಿಕ ಆದಾಯ ಮೌಖಿಕವಾಗಿ ಕೇಳಿದ್ದೇವೆ ಆದರೆ ದಾಖಲಾತಿ ಪಡೆದಿಲ್ಲ. ಜಾಮೀನುದಾರರ ವಾರ್ಷಿಕ ಆದಾಯ ನೆನಪಿಲ್ಲ. ದಾಖಲಾತಿ ನೋಡಿ ಹೇಳಬೇಕು . ಸಾಲಗಾರರ ವಾರ್ಷಿಕ ಆದಾಯ ಎಷ್ಟಿತ್ತು ನೆನಪಿಲ್ಲ. ಅವರ ವಾರ್ಷಿಕ ಆದಾಯದ ಬಗ್ಗೆ ದಾಖಲಾತಿ ಪಡೆಯಲು ತೊಂದರೆ ಇರಲಿಲ್ಲ . ಸಾಲವನ್ನು ಕೊಡುವಾಗ ಭದ್ರತೆಗಾಗಿ ಪಹಣಿ ಹಾಗೂ ಜಾಮೀನುದಾರರು ನೌಕರರಾಗಿದ್ದರೆ ಅವರ ವೇತನ ಪ್ರಮಾಣ ಪತ್ರ ಹಾಗೂ ಖಾಲಿ ಚೆಕ್ ನ್ನು ಪಡೆಯುತ್ತೇವೆ ಎಂದರೆ ಸಾಕ್ಷಿ ಪಹಣಿ ಪತ್ರಿಕೆ ಮತ್ತು ವೇತನ ಪ್ರಮಾಣ ಪತ್ರ ಪಡೆಯುತ್ತೇವೆ ಚೆಕ್ ಪಡೆದುಕೊಳ್ಳುವುದಿಲ್ಲ ಎಂದು ನುಡಿದಿರುತ್ತಾರೆ . ಈ ಕೇಸಿನಲ್ಲಿ ಸಾಲಗಾರರಿಂದ ಭದ್ರತೆಯಾಗಿ 20 ಸಾವಿರ ರೂ. ಗಳ ಎಫ್ ಡಿ , ಇಬ್ಬರು ಜಾಮೀನುದಾರರು, ಸಾಲದ ಕರಾರು , ಮುದ್ದತ್ತು ವಚನ , ಹೈಪೋಥಿಕೇಶನ್ ಅಗ್ರಿಮೆಂಟ್ , ಡಿಮಾಂಡ್ ಪ್ರಾಮಿಸರಿ ನೋಟ್ ಪಡೆದುಕೊಂಡಿದ್ದೇವೆ . ಸಾಲ 36 ಕಂತಿನ ಸಾಲವಾಗಿರುತ್ತದೆ. ಸಾಲ ತೆಗೆದುಕೊಂಡ ನಂತರ ಸಾಲಗಾರ

ಮೂರು ಕಂತು ಕಟ್ಟಿದ್ದಾರೆ. ಜಾಮೀನುದಾರರು ಹಣ ಕಟ್ಟಿಲ್ಲ. ಐದು ಕಂತು ಕಟ್ ಬಾಕಿಯಾದಾಗ ನೋಟಿಸನ್ನು ನೀಡುತ್ತೇವೆ. ಈ ಸಾಲಕ್ಕೆ ಎಷ್ಟು ಕಂತು ಬಾಕಿ ಇದ್ದಾಗ ನೋಟಿಸು ನೀಡಿದ್ದೇವೆ ನೆನಪಿಲ್ಲ . ನೋಟಿಸಿನಲ್ಲಿ ಎಷ್ಟು ಹಣ ಕಟ್ ಬಾಕಿ ಇದೆ ಎಂದು ಹೇಳಿದ್ದೇವೆ . ಆ ನೋಟಿಸನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ನಾವು ಅಂಚೆ ನೋಟಿಸನ್ನು ಕಳುಹಿಸಿದ್ದೆವು . ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.